# ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ದೂ.ಸಂ: 08531260042
ಮೊ.ಸಂ:9448482170
email:-aeedevadurga@gescom.in

ರವರ ಕಛೇರಿ,
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಗು.ವಿ.ಸ.ಕಂ.ನಿ.ದೇವದುರ್ಗ.

ಸಂ:ಸಕಾನಿಇಂ.(ವಿ)/ಸ.ಇಂ/ದೇ/2019-20/ 4920-23 ದಿನಾಂಕ:- 18-11-19

## ಗ್ರಾಹಕರ ಕುಂದು ಕೊರತೆ/ ಗ್ರಾಹಕರ ಸಂವಾದ ಸಭೆ

ಪ್ರಪ್ರಥಮವಾಗಿ ಶ್ರೀ ಬಸವರಾಜ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರು ಹಿರಿಯ ಅಧಿಕಾರಿಗಳಾದ ಶ್ರೀ ರಾಜೇಶ.ಎಮ್. ಪ್ರಭಾರಿ ಅಧಿಕ್ಷಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ರಾಯಚೂರು ಕಛೇರಿಗೆ ಸಭೆಗೆ ಸ್ವಾಗತ ಕೋರುತ್ತಾ ಜೊತೆಯಲ್ಲಿ ಸಹಾಯಕ ಇಂಜಿನಿಯರ್ (ತಾಂತ್ರಿಕ), ಹಾಗೂ ಶಾಖಾಧಿಕಾರಿಗಳು, ಉಪವಿಭಾಗದ ವಿವಿಧೆಡೆಯಿಂದ ಆಗಮಿಸಿದ್ದ ಗ್ರಾಹಕರುಗಳನ್ನು ಉಪ-ವಿಭಾಗದ ಗ್ರಾಹಕರ ಕುಂದು ಕೊರತೆಗಳು ಹಾಗೂ ಬೇಡಿಕೆಗಳಿಗೆ ಸ್ಪಂದಿಸುವ ಗ್ರಾಹಕರ ಸ್ಪಂದನ ಕಾರ್ಯಕ್ರಮಕ್ಕೆ ಆದರದಿಂದ ಬರಮಾಡಿಕೊಂಡು ಸ್ವಾಗತ ಕೋರಲಾಯಿತು.

ದಿನಾಂಕ: 16/11/2019 ರಂದು ಬೆಳ್ಳಿಗ್ಗೆ 11.00 ಗಂಟೆಗೆ ಉಪ-ವಿಭಾಗ ಕಛೇರಿಯಲ್ಲಿ ಹಿರಿಯ ಅಧಿಕಾರಿಗಳಾದ ಶ್ರೀ ರಾಜೇಶ.ಎಮ್. ಪ್ರಭಾರಿ ಅಧಿಕ್ಷಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ರಾಯಚೂರ ರವರ ಅಧ್ಯಕ್ಷತೆಯಲ್ಲಿ, ಉಪ-ವಿಭಾಗದ ಗ್ರಾಹಕರುಗಳಿಗೆ ಹಾಗೂ ಎಲ್ಲಾ ಶಾಖಾಧಿಕಾರಿಗಳು ಹಾಗೂ ಎಲ್ಲಾ ಜಕಾತಿಯ ಗ್ರಾಹಕರ ಉಪಸ್ಥಿತಿಯಲ್ಲಿ ಹಾಗೂ ತಾಲ್ಲೂಕಿನ ಪತ್ರಕರ್ತರ ಉಪಸ್ಥಿತಿಯಲ್ಲಿ ತಾಲ್ಲೂಕಿನ ವಿವಿಧಡೆಯಿಂದ ಬಂದ ಗ್ರಾಹಕರ ಕುಂದು ಕೊರತೆಗಳು ಹಾಗೂ ಬೇಡಿಕೆಗಳಿಗೆ ಸ್ಪಂದಿಸುವ ಗ್ರಾಹಕರ ಸ್ಪಂದನ ಕಾರ್ಯಕ್ರಮ ಸಭೆಯನ್ನು ನಡೆಸಲಾಯಿತು.

### ಸಭೆಯ ಹಾಜರಾತಿ:

1) ಶ್ರೀ ರಾಜೇಶ.ಎಮ್. ಪ್ರಭಾರಿ ಅಧೀಕ್ಷಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ಜೆಸ್ಕಾಂ ರಾಯಚೂರು.
2) ಶ್ರೀ ಬಸವರಾಜ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ದೇವದುರ್ಗ.
3) ಶ್ರೀ ಮಹೇಶ ಹಾಲು, ಶಾಖಾಧಿಕಾರಿಗಳು (ವಿ), ಕಾರ್ಯ ಮತ್ತು ಪಾಲನೆ ಶಾಖೆ ದೇವದುರ್ಗ.
4) ಶ್ರೀ ಶ್ರೀನಿವಾಸ್ ಗೊಲ್ಲರ್ ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನೆ ಶಾಖೆ ಮಸರಕಲ್.
5) ಶ್ರೀ ಖಾದರ್‌ಬಾಷಾ ಶಾಖಾಧಿಕಾರಿಗಳು (ವಿ), ಕಾರ್ಯ ಮತ್ತು ಪಾಲನೆ ಶಾಖೆ ಅರಕೇರಾ.
6) ಶ್ರೀ ರಾಘವೇಂದ್ರ, ಪ್ರಭಾರಿ ಶಾಖಾಧಿಕಾರಿಗಳು (ವಿ) ಕಾರ್ಯ ಮತ್ತು ಪಾಲನೆ ಶಾಖೆ ಜಾಲಹಳ್ಳಿ.
7) ಶ್ರೀ ಮಹೇಶ, ಶಾಖಾಧಿಕಾರಿಗಳು (ವಿ) ಕಾರ್ಯ ಮತ್ತು ಪಾಲನೆ ಶಾಖೆ ಗಬ್ಬೂರು.
8) ಶ್ರೀ ಜಿಲಾನಿಪಾಷ, ಶಾಖಾಧಿಕಾರಿಗಳು(ವಿ) ಕಾರ್ಯ ಮತ್ತು ಪಾಲನೆ ಶಾಖೆ ಗಲಗ್,
9) ಕುಮಾರಿ ಕಮಲಾ ಹಿರಿಯ ಸಹಾಯಕಿ (ಕಂ) ಕಾರ್ಯ ಮತ್ತು ಪಾಲನೆ ಶಾಖೆ ದೇವದುರ್ಗ.
10) ಶ್ರೀ ದೇವದಾಸ ಪ್ರಭಾರಿ ಶಾಖಾಧಿಕಾರಿಗಳು (ವಿ) ಕಾರ್ಯ ಮತ್ತು ಪಾಲನೆ ಶಾಖೆ ಗೂಗಲ್.

### ಸಭೆಯಲ್ಲಿ ಚರ್ಚಿಸಿದ ವಿಷಯಗಳು

1) ಸಭೆಯಲ್ಲಿ ಹಾಜರಿದ್ದ ಹುಸೇನ್ ಬಾಷಾ ಸಾ/ ದೇವದುರ್ಗ ರವರು ಮಾತನಾಡಿ ಅವರ ಹೊಲದ ATL ಸ್ಕೀಮ್‌ನಲ್ಲಿ ವಿದ್ಯುತ್ ಕಂಬ ಹಾಗೂ ವಿದ್ಯುತ್ ಪರಿವರ್ತಕ ನೀಡಲು ಕೇಳಿದರು.

=) ಸದರಿ ಮನವಿಗೆ ಸ್ಪಂದಿಸಿ ಕಾಮಗಾರಿಗೆ ಸಂಭಂಧ ಪಟ್ಟ ಸಾಮಗ್ರಿಗಳ ಲಭ್ಯತೆ ಆಧಾರದ ಮೇಲೆ ಕಾಮಗಾರಿಯನ್ನು ಪೂರ್ಣಮಾಡಿಕೊಡುವಂತೆ ಕಾಮಗಾರಿ ಘಟಕಕ್ಕೆ ಸೂಚಿಸಲಾಯಿತು.

2) ಸಭೆಯಲ್ಲಿ ಹಾಜರಿದ್ದ ಶ್ರೀ ಯಲ್ಲಪ್ಪ ಸಾ/ಗೋಪಳಾಪುರ ರವರು ಮಾತನಾಡಿ ಸದರಿ ಗ್ರಾಮದಲ್ಲಿ ವಿದ್ಯುತ್ ಕಂಬ ಬಾಗಿದ್ದು ಹಾಗೂ ಹಳೆಯ ವಿದ್ಯುತ್ ಕಂಬ, ವಾಹಕವನ್ನು ಬದಲಾಯಿಸಿ ಹೊಸ ವಿದ್ಯುತ್ ವಾಹಕ ಹಾಗೂ ಕಂಬಗಳನ್ನು ಅಳವಡಿಸಬೇಕೆಂದು ಕೋರಿದರು.

Scanned by CamScanner

=) ಸದರಿ ಮನವಿಗೆ ಸ್ಪಂದಿಸಿ ಮಸರಕಲ್ ಶಾಖಾಧಿಕಾರಿಗಳು ಅಂದಾಜು ಪ್ರಕ್ರಿಯೆ ಪಟ್ಟಿಯನ್ನು ಸಿದ್ದಪಡಿಸಿ ವಿಭಾಗೀಯ ಕಛೇರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ. .

3) ಸಭೆಯಲ್ಲಿ ಹಾಜರಿದ್ದ ಸಿದ್ದಲಿಂಗಯ್ಯಸ್ವಾಮೀ ಸಾ/ ದೇವದುರ್ಗ ರವರ ಮಾತನಾಡಿ ಮೋಸೀನ್ ಸಾಬ್ ಲೇಔಟ್ (ಸಾಂತಿ ನಗರ) ದಲ್ಲಿ ವಿದ್ಯುತ್ ಕಂಬಗಳು ಬಾಗಿರುತ್ತದೆ. ಸದರಿ ವಿದ್ಯುತ್ ಕಂಬಗಳನ್ನು ಬದಲಾಯಿಸಲು ಮನವಿ ಮಾಡಿದರು,

=) ಸದರಿ ಮನವಿಗೆ ಸ್ಪಂದಿಸಿ ದೇವದುರ್ಗ ನಗರ ಶಾಖಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳು ಸೂಚಿಸಲಾಯಿತು.

4) ಸಭೆಯಲ್ಲಿ ಹಾಜರಿದ್ದ ಶ್ರೀ ಸೂಗಪ್ಪ ಸಾ/ ದೇವದುರ್ಗ ರವರ ಮನೆ ಆರ್.ಆರ್.ಸಂಖ್ಯೆ 2455 ರ ವಿದ್ಯುತ್ ಮಾಪಕ ಬದಲಾಯಿಸಲು ಮನವಿ ಮಾಡಿದರು,

=) ಸದರಿ ಮನವಿಗೆ ಸ್ಪಂದಿಸಿ ಸದರಿ ದೇವದುರ್ಗ ಶಾಖೆಯ ಶಾಖಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

5) ಸಭೆಯಲ್ಲಿ ಹಾಜರಿದ್ದ ಶ್ರೀ ಶರಣಗೌಡ ಸಾ/ ಹಿರೇಬೂದೂರು ಗ್ರಾಮದಲ್ಲಿ ಸರ್ವೆ.ನಂ–11 ವಿಸ್ತೀರ್ಣ 8– ಎಕರೆ ಜಮೀನಿನಲ್ಲಿ ಇರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಮನವಿ ಮಾಡಿದರು.

=) ಸದರಿ ಮನವಿಗೆ ಸ್ಪಂದಿಸಿ ಗಬ್ಬೂರು ಶಾಖಾಧಿಕಾರಿಗಳಿಗೆ ಸ್ವಯಂ ಕಾರ್ಯಾಗತ ಯೋಜನೆ ಅಡಿಯಲ್ಲಿ ಅಂದಾಜು ಪತ್ರಿಕೆ ತಯಾರಿಸಲು ಸೂಚಿಸಿದರು.

6) ಸಭೆಯಲ್ಲಿ ಹಾಜರಿದ್ದ ಶ್ರೀ ನಾಗರಾಜ ಸಾ/ ದೇವದುರ್ಗ ರವರು ಶಂಭುಲಿಂಗೇಶ್ವರ ಕಾಲೋನಿಯಲ್ಲಿ ರಸ್ತೆ ಮಧ್ಯದಲ್ಲಿ ಇರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಮನವಿ ಮಾಡಿದರು.

=) ಸದರಿ ಮನವಿಗೆ ಸ್ಪಂದಿಸಿ ದೇವದುರ್ಗ ನಗರ ಶಾಖಾಧಿಕಾರಿಗಳಿಗೆ ಸ್ವಯಂ ಕಾರ್ಯಾಗತ ಯೋಜನೆ ಅಡಿಯಲ್ಲಿ ಅಂದಾಜು ಪತ್ರಿಕೆ ತಯಾರಿಸಲು ಸೂಚಿಸಿದರು.

ಕೊನೆಯಲ್ಲಿ ಸಭೆಗೆ ಆಗಮಿಸಿದ ಎಲ್ಲಾ ಗ್ರಾಹಕರಿಗೆ ಹಾಗೂ ಅಧಿಕಾರಿಗಳಿಗೆ ಧನ್ಯವಯವಾದ ಸಮರ್ಪಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ)
ಕಾರ್ಯ ಮತ್ತು ಪಾಲನಾ ಉಪ–ವಿಭಾಗ
ಗು.ವಿ.ಸ.ಕಂ.ನಿ. ದೇವದುರ್ಗ,

ಪ್ರತಿಗಳನ್ನು ದಯಾಪರ ಮಾಹಿತಿಗಾಗಿ:

1) ಮಾನ್ಯ ಮುಖ್ಯ ಅಭಿಯಂತರರು(ವಿ), ವಲಯ ಕಛೇರಿ ಜೆಸ್ಕಾಂ, ಬಳ್ಳಾರಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ವೃತ್ತ ಕಛೇರಿ ಜೆಸ್ಕಾಂ, ರಾಯಚೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ ಜೆಸ್ಕಾಂ ರಾಯಚೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4) ಕಛೇರಿ ಪ್ರತಿ. (AE(T)-15).

Scanned by CamScanner